**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು**

ವಿಷಯ: ಮಂಡ್ಯ ಜನತಾ ಶಿಕ್ಷಣ ಟ್ರಸ್ಟ್ (ರಿ). ಇವರ ವ್ಯಾಪ್ತಿಯಲ್ಲಿ ಬರುವ ಪಿ.ಇ.ಎಸ್. ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜು, ಮಂಡ್ಯ, ಇಲ್ಲಿ ಖಾಲಿ ಇರುವ ವಾಣಿಜ್ಯಶಾಸ್ತ್ರ ಹಾಗೂ ಗ್ರಂಥಪಾಲಕರ ಹುದ್ದೆಗೆ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಹೊಂದಿದ ಅಭ್ಯರ್ಥಿಗಳ ಆಯ್ಕೆ ಅನುಮೋದಿಸುವ ಬಗ್ಗೆ.

ಉಲ್ಲೇಖ:
1) ಸರ್ಕಾರಿ ಆದೇಶ ಸಂಖ್ಯೆ: ಇಡಿ/146/ಯುಪಿಸಿ/79, ದಿ:03.10.81 ಹಾಗೂ ಅದಕ್ಕೆ ಸಂಬಂಧಿಸಿದಂತೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ತಿದ್ದುಪಡಿ ಆದೇಶಗಳು.
2) ಸರ್ಕಾರದ ಆದೇಶ ಸಂಖ್ಯೆ: ಇಡಿ/37/ಯುಎನ್ಇ/2009 ದಿ:24-12-2009.
3) ಸರ್ಕಾರದ ಪತ್ರ ಸಂಖ್ಯೆ: ಇಡಿ/26/ಯುಪಿಸಿ/2012 ದಿ:22.08.2012.
4) ಈ ಕಛೇರಿಯ ಸಮಸಂಖ್ಯೆಯ ಪತ್ರ ದಿನಾಂಕ:22-12-2012.
5) ಪ್ರಾದೇಶಿಕ ಜಂಟಿ ನಿರ್ದೇಶಕರು, ಮೈಸೂರು, ಇವರ ಪತ್ರ ಸಂಖ್ಯೆ: ಪ್ರಾಕಮೈ/ಕಾಶಿಇ/06/ಖಾಹುಭ/ಜಶಿಟ್ರಮಂ/2011/ಭಾಗ-2 ದಿ:05.08.2013.
6) ಪೋಲೀಸ್ ಕಮೀಷನರ್‌ರವರ ಕಛೇರಿ, ಮೈಸೂರು ನಗರ, ಇವರ ಪತ್ರ ಸಂಖ್ಯೆ: ಸಿಎಸ್‌ಬಿಮೈನ/ವಿಆರ್/1108/2013 ದಿನಾಂಕ:07.10.2013.
7) ಪೋಲೀಸ್ ಸೂಪರಿಂಟೆಂಡೆಂಟ್‌ರವರ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ, ಇವರ ಪತ್ರ ಸಂಖ್ಯೆ:ಎಸ್‌ಬಿ/ವಿಆರ್‌ಎ/802/2013 ದಿ:02.10.2013.
8) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ, ಇವರ ಪತ್ರ ಸಂಖ್ಯೆ: ಸಕಅ/ಸಿಂಧುತ್ವ/ಸಿಆರ್/57/2013-14 ದಿ:22.10.2013.

******

**ಪ್ರಸ್ತಾವನೆ:**

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಖಾಲಿ ಇರುವ ಮಂಜೂರಾದ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಉಲ್ಲೇಖ (4)ರ ಈ ಕಛೇರಿಯ ಪತ್ರದಲ್ಲಿ ಮಂಡ್ಯದ ಪಿ.ಇ.ಎಸ್. ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಜಾಹೀರಾತು ಪ್ರಕಟಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಿ, ಆಯ್ಕೆ ಸಮಿತಿ ಮೂಲಕ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸುವಂತೆ ಮೈಸೂರು ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ತಿಳಿಸಲಾಗಿತ್ತು. ಅದರಂತೆ ಪ್ರಾದೇಶಿಕ ಜಂಟಿ ನಿರ್ದೇಶಕರು ದಿ:05-08-2013ರಲ್ಲಿ ಸದರಿ ಕಾಲೇಜಿನ 02 ಮಂದಿ ವಾಣಿಜ್ಯಶಾಸ್ತ್ರ ಉಪನ್ಯಾಸಕರ ಮತ್ತು ಗ್ರಂಥಪಾಲಕರ ಒಂದು ಹುದ್ದೆಗಳನ್ನು ಆಡಳಿತ ಮಂಡಳಿ ಜಾಹೀರಾತುಪಡಿಸಿ, ಉಲ್ಲೇಖ (1)ರ ಸರ್ಕಾರದ ಆದೇಶದನ್ವಯ, ಆಯ್ಕೆ ಸಮಿತಿ ರಚಿಸಿ, ಆಯ್ಕೆ ಮಾಡಿ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ವಾಣಿಜ್ಯಶಾಸ್ತ್ರ ವಿಷಯದ 02 ಹುದ್ದೆಗಳಲ್ಲಿ ಸಾಮಾನ್ಯ ವರ್ಗಕ್ಕೆ ಸೇರಿದ ಒಂದು ಹುದ್ದೆಯನ್ನು ಭರ್ತಿ ಮಾಡಲು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ. ಆದ್ದರಿಂದ, ಸಾಮಾನ್ಯ ವರ್ಗಕ್ಕೆ ಸೇರಿದ ಒಂದು ಹುದ್ದೆಯನ್ನು ಹೊರತುಪಡಿಸಿ ಪ್ರವರ್ಗ-1ಕ್ಕೆ ಸೇರಿದ ವಾಣಿಜ್ಯಶಾಸ್ತ್ರ ಮತ್ತು ಗ್ರಂಥಪಾಲಕರ ಹುದ್ದೆಗಳನ್ನು ಆಯ್ಕೆ ಮಾಡಿರುವುದನ್ನು ಅನುಮೋದಿಸುವ ಬಗ್ಗೆ ಉಲ್ಲೇಖ (5)ರಲ್ಲಿ ಮೈಸೂರು ಪ್ರಾದೇಶಿಕ ಜಂಟಿ ನಿರ್ದೇಶಕರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಖಾಲಿ ಹುದ್ದೆ ಹಾಗೂ ಮೀಸಲಾತಿಗನುಗುಣವಾಗಿ ಆಯ್ಕೆ ಸಮಿತಿ ಮೂಲಕ ಆಯ್ಕೆ ಹೊಂದಿರುವ ಶ್ರೀಮತಿ.ಪರಮೇಶ್ವರಿ.ಜಿ., ವಾಣಿಜ್ಯಶಾಸ್ತ್ರ ಉಪನ್ಯಾಸಕರು ಮತ್ತು ಶ್ರೀ.ಸೆಲ್ವರಾಜ ಎ., ಗ್ರಂಥಪಾಲಕರು ಇವರುಗಳ ವಿರುದ್ಧ ಯಾವುದೇ ವಿಧವಾದ ವ್ಯತಿರಿಕ್ತ ವರದಿಗಳು ವರದಿಯಾಗಿರುವುದಿಲ್ಲವೆಂದು ಉಲ್ಲೇಖ (6) ಮತ್ತು (7)ರ ಪೋಲೀಸ್ ವರದಿಯಲ್ಲಿ ತಿಳಿಸಿರುವುದರಿಂದ ಹಾಗೂ ಉಲ್ಲೇಖ (8)ರಲ್ಲಿ ಶ್ರೀ.ಸೆಲ್ವರಾಜ.ಎ., ಇವರು ಪರಿಶಿಷ್ಟ ಜಾತಿಗೆ ಸೇರಿರುವುದು ಸಿಂಧುತ್ವವಾಗಿದೆ ಎಂದು ಸಮಿತಿಯ ಮೂಲಕ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಪ್ರಮಾಣೀಕರಿಸಿರುತ್ತಾರೆ. ಆದ್ದರಿಂದ, ಸದರಿಯವರುಗಳಿಗೆ ನೇಮಕಾತಿ ಅನುಮೋದನೆ ನೀಡಲು ಈ ಆದೇಶ.

**ಆದೇಶ ಸಂಖ್ಯೆ: ಕಾಶಿಇ/95/ಖಾಹುಭ/2007-08/ಖಾಕಾವಿ-1/ನೇಪಾವಿ-3(ಸಂಪುಟ-4), ಬೆಂಗಳೂರು, ದಿನಾಂಕ:16.11.2013**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಮಂಡ್ಯದ ಪಿ.ಇ.ಎಸ್. ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಮಂಜೂರಾದ ಖಾಲಿ ಇರುವ 02 ವಾಣಿಜ್ಯಶಾಸ್ತ್ರ ಉಪನ್ಯಾಸಕರ ಮತ್ತು ಗ್ರಂಥಪಾಲಕರ ಒಂದು ಹುದ್ದೆಗಳಿಗೆ ಆಡಳಿತ ಮಂಡಳಿ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಿಕೊಂಡಿದ್ದು, ಅದರಲ್ಲಿ ಸಾಮಾನ್ಯ ವರ್ಗಕ್ಕೆ ಸೇರಿದ ಒಂದು ಹುದ್ದೆಯನ್ನು ಭರ್ತಿ ಮಾಡಲು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವುದರಿಂದ, ಅದನ್ನು ಹೊರತುಪಡಿಸಿ, ಪ್ರವರ್ಗ-1ಕ್ಕೆ ಸೇರಿದ ವಾಣಿಜ್ಯಶಾಸ್ತ್ರ ಉಪನ್ಯಾಸಕರ ಮತ್ತು ಗ್ರಂಥಪಾಲಕರ ಹುದ್ದೆಗಳನ್ನು ಆಯ್ಕೆ ಸಮಿತಿಯ ಹಾಗೂ ಮೈಸೂರು ಪ್ರಾದೇಶಿಕ ಜಂಟಿ ನಿರ್ದೇಶಕರ ಶಿಫಾರಸ್ಸಿನನ್ವಯ ಈ ಕೆಳಕಂಡ ಅಭ್ಯರ್ಥಿಗಳ

PRINCIPAL
P.E.S. College of Science, Arts & Commerce, MANDYA.

ನೇಮಕಾತಿಯನ್ನು ಅವರುಗಳ ಹೆಸರಿನ ಮುಂದೆ ತಿಳಿಸಿರುವ ವೇತನ ಶ್ರೇಣಿಯಲ್ಲಿ ಈ ಕೆಳಕಂಡ ನಿಬಂಧನೆ ಒಳಪಟ್ಟು ಅನುಮೋದನೆಯನ್ನು ನೀಡಲಾಗಿದೆ.

| ಕ್ರಮ ಸಂಖ್ಯೆ | ಹೆಸರು ಮತ್ತು ಹುದ್ದೆ ಶ್ರೀ/ಶ್ರೀಮತಿ | ವಿಷಯ | ಜನ್ಮ ದಿನಾಂಕ | ವಿದ್ಯಾರ್ಹತೆ | ವೇತನ ಶ್ರೇಣಿ | ಮೀಸಲಾತಿ |
|---|---|---|---|---|---|---|
| 1 | ಪರಮೇಶ್ವರಿ ಜಿ | ವಾಣಿಜ್ಯಶಾಸ್ತ್ರ | 10.07.1980 | ಎಂ.ಕಾಂ. ಎನ್.ಇ.ಟಿ. | ರೂ.15600-39100 + ಎಜಿಪಿ 6000 (ಯುಜಿಸಿ) | ಪ್ರವರ್ಗ-1 |
| 2 | ಸೆಲ್ವರಾಜ ಎ | ಗ್ರಂಥಪಾಲಕರು | 22.04.1981 | ಎಂ.ಎಲ್.ಐ.ಎಸ್ ಎನ್.ಇ.ಟಿ. | ರೂ.15600-39100 + ಎಜಿಪಿ 6000 (ಯುಜಿಸಿ) | ಪರಿಶಿಷ್ಟ ಜಾತಿ |

**ಷರತ್ತುಗಳು:-**

1) ಸರ್ಕಾರಿ ಆದೇಶ ಸಂಖ್ಯೆ: ಇಡಿ/146/ಯುಪಿಸಿ/79, ದಿನಾಂಕ:03.10.81 ಮತ್ತು ಈ ನಿಟ್ಟಿನಲ್ಲಿ ಆಗಿಂದಾಗ್ಗೆ ಹೊರಡಿಸಿರುವ ಮತ್ತು ಹೊರಡಿಸುವ ತಿದ್ದುಪಡಿ ಹಾಗೂ ಸ್ಪಷ್ಟೀಕರಣ ಅನುಗುಣವಾಗಿ ನಿಗದಿಪಡಿಸಿದ ಕಾರ್ಯಭಾರವನ್ನು ಹೊಂದಿರತಕ್ಕದ್ದು. ಅಲ್ಲದೆ ಮುಂದೆ ಸರ್ಕಾರ ವಿಧಿಸಬಹುದಾದ ಷರತ್ತುಗಳಿಗೆ ಈ ನೇಮಕಾತಿ ಒಳಪಟ್ಟಿರುತ್ತದೆ.
2) ಸದರಿ ಅಭ್ಯರ್ಥಿಗಳ ನೇಮಕಾತಿಯು ಈ ಆದೇಶದ ದಿನಾಂಕದ ನಂತರ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಜಾರಿಗೆ ಬರುತ್ತದೆ ಹಾಗೂ ಯಾವುದೇ ಹಿಂದಿನ ವೇತನ ಬಾಕಿಗೆ ಅರ್ಹತೆ ಹೊಂದಿರುವುದಿಲ್ಲ.
3) ಸದರಿಯವರುಗಳ ನೇಮಕಾತಿಯ ಸೇವಾ ವಿವರಗಳು ಕಾಲೇಜಿನ ಸ್ಥಳೀಯ ಲೆಕ್ಕ ಪತ್ರ ತನಿಖಾ ಸಮಯದಲ್ಲಿ ಪರಿಶೀಲನೆಗೆ ಒಳಪಟ್ಟಿರುತ್ತದೆ. ಈ ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಕಾಲೇಜಿಗೆ ನೀಡುತ್ತಿರುವ ಅನುದಾನವನ್ನು ಹಿಂತೆಗೆದುಕೊಳ್ಳುವ ಹಕ್ಕನ್ನು ಕಾಲೇಜು ಶಿಕ್ಷಣ ಆಯುಕ್ತರಿಗೆ ಕಾಯ್ದಿರಿಸಿದೆ.
4) ಈ ನೇಮಕಾತಿಯು ತಾತ್ಕಾಲಿಕವಾಗಿದ್ದು, ಆಗಿಂದಾಗ್ಗೆ ಈ ಸಂಬಂಧ ವಿಧಿಸುವ ಸೇವಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.
5) ಮೇಲ್ಕಂಡ ಅಭ್ಯರ್ಥಿಗಳಿಗೆ ಅವರು ಕೆಲಸಕ್ಕೆ ಹಾಜರಾದ ನಂತರ ಸರ್ಕಾರಿ ಆದೇಶ ಸಂಖ್ಯೆ: FD (Spl) 04/PET/2005 ದಿನಾಂಕ:31-03-2006ರಲ್ಲಿ ಪ್ರಕಟಿತವಾಗಿರುವ New Defined Contributory Pension ಅನ್ವಯವಾಗುತ್ತದೆ.

(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

12/11/11

**ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು**

**ಇವರಿಗೆ:**

1) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಕಛೇರಿ, ಮೈಸೂರು - ಇವರ ಮಾಹಿತಿಗಾಗಿ ಮತ್ತು ಮುಂದಿನ ಅಗತ್ಯ ಕ್ರಮಕ್ಕಾಗಿ - ಶ್ರೀಮತಿ.ಪರಮೇಶ್ವರಿ.ಜಿ., ವಾಣಿಜ್ಯಶಾಸ್ತ್ರ ಉಪನ್ಯಾಸಕರು ಹಾಗೂ ಶ್ರೀ.ಸೆಲ್ವರಾಜ.ಎ., ಗ್ರಂಥಪಾಲಕರು, ಇವರುಗಳ ವಾರ್ಷಿಕ ವೇತನ ಪಟ್ಟಿಗೆ ಅನುಮೋದನೆ ನೀಡುವಾಗ ವಿದ್ಯಾರ್ಹತೆ, ವಯೋಮಿತಿ ಮತ್ತು ಮೀಸಲಾತಿಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಪರಿಶೀಲನಾ ಮಾಡಬೇಕೆಂಬ ಸೂಚನೆಯೊಂದಿಗೆ ಹಾಗೂ ಸುಳ್ಳು ದಾಖಲಾತಿಗಳಿದ್ದಲ್ಲಿ ಸದರಿ ಅನುಮೋದನೆ ರದ್ದುಗೊಳಿಸಲು ಪ್ರಸ್ತಾವನೆಯನ್ನು ಈ ಕಛೇರಿಗೆ ಕಳುಹಿಸಲು ಷರತ್ತಿಗೊಳಪಟ್ಟಿರುತ್ತದೆ.
2) ಅಧ್ಯಕ್ಷರು/ಕಾರ್ಯದರ್ಶಿಗಳು, ಜನತಾ ಶಿಕ್ಷಣ ಟ್ರಸ್ಟ್ (ರಿ), ಮಂಡ್ಯ - ಮಾಹಿತಿಗಾಗಿ.
3) ಪ್ರಾಂಶುಪಾಲರು, ಪಿ.ಇ.ಎಸ್. ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜು, ಮಂಡ್ಯ - ಅಗತ್ಯ ಕ್ರಮಕ್ಕಾಗಿ.

**ಪ್ರತಿ ರವಾನೆ:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು - 1 - ಮಾಹಿತಿಗಾಗಿ.
2) ಲೆಕ್ಕಾಧಿಕಾರಿಗಳು, ಆಯವ್ಯಯ ವಿಭಾಗ, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು - ಮಾಹಿತಿಗಾಗಿ.
3) ಕಛೇರಿ ಪ್ರತಿ.

Principal
22/11/13